ಶ್ರೀ ಎಚ್. ಎನ್. ನಂಜೇಗೌಡ.—ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಪ್ರಕಾರ ಯಾವ ಜಮೀನಿಗೆ ಯಾವರೀತಿ ಪರಿಹಾರ ಕೊಡಬೇಕು ಎಂದು ಇದೆ, ಅದರ ಪ್ರಕಾರ ಲ್ಯಾಂಡ್ ಅಕ್ವಿಜಿಷನ್ ಆಫೀಸರ್ ಇದನ್ನು ಪರಿಶೀಲಿಸುತ್ತಾರೆ. ಇದಕ್ಕೂ ಕೆಲವರಿಗೆ ತೃಪ್ತಿಯಾಗದಿದ್ದರೆ, ಕೋರ್ಟಿಗೆ ಹೋಗುವ ವ್ಯವಸ್ಥೆ ಇದೆ. ಅನೇಕ ಜನಗಳು ಆ ರೀತಿಯಾಗಿ ಮಾಡುತ್ತಾ ಇದ್ದಾರೆ.

ಶ್ರೀ ಕೆ. ಎಚ್. ಹನುಮೇಗೌಡ.—ಹೇಮಾವತಿ ಯೋಜನೆಯಿಂದ ಮುಳುಗಡೆಯು ರೈತರಿಗೆ ನಾಲಾ ಪ್ರದೇಶದಲ್ಲಿ ನೀರಾವರಿಯಾಗುವ ಜಮೀನನ್ನು ಕೊಡಬೇಕು ಎಂದು ಸರ್ಕಾರಕ್ಕೆ ಅರಿಕೆಗಳು ಬರುತ್ತಾ ಇವೆಯೇ ? ಸರ್ಕಾರಿ ವಶದಲ್ಲಿರುವ ಭೂಮಿಯನ್ನು ಇವರಿಗಾಗಿ ರಿಸರ್ವ್ ಮಾಡಿ ಇವರಿಗೆ ಜಮೀನನ್ನು ಕಡ್ಡಾಯವಾಗಿ ಕೊಡಬೇಕು ಎಂದು ನಿರ್ದೇಶನ ಕೊಡುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ಜಮೀನು ಕೊಡತಕ್ಕುದ್ದು ಕಾನೂನು ಮಿತಿಗೆ ಒಳಕಟ್ಟು ಕೊಡುತ್ತಾ ಇಲ್ಲ ಕಾನೂನು ಪ್ರಕಾರ ಪರಿಹಾರ ಕೊಡಬೇಕು ಕೊಡುತ್ತೇವೆ. ಆ ವಿಭಾಗದಲ್ಲಿ ಕೊಡುವುದಕ್ಕೆ ಜಮೀನು ಇದ್ದರೆ. ಅಂಥ ಕಡೆ ಮುಳುಗಡೆಯಾದ ರೈತರಿಗೆ ಜಮೀನನ್ನು ಕೊಡುತ್ತೇವೆ. ಮಲಪ್ರಭಾ ಏರಿಯಾದಲ್ಲಿ ಜಮೀನೇ ಇರಲಿಲ್ಲ. ಅಲ್ಲಿ ಕೊಡುವುದಕ್ಕೆ ಆಗಲಿಲ್ಲ. ಇಲ್ಲಿಯೂ ಕೂಡ ಸಾವಿರಾರು ಏಕರೆ ಜಮೀನನ್ನು ರಿಸರ್ವ್ ಮಾಡಿದೆ, ಇಲ್ಲಿ ಎಲ್ಲರಿಗೂ ಕೊಡುವ ವ್ಯವಸ್ಥೆ ಇದೆ. ಅದರಂತೆ ಮಾಡುತ್ತೇವೆ.

## Rise in prices of Food-Grains and other Essential Commodities

559. Sri A. G. KODGI (Baindur).—

Will the Minister of State for Food and Civil Supplies be pleased to state :—

(*a*) whether it has come to the notice of the Government that the prices of foodgrains and other essential Commodities are rising abnormally ; the steps taken by Government to arrest the same ;

(*b*) whether it has come to the notice of the Government that the ban on inter-district movement of foodgrains and thereby the difference of prices from District to District is a cause for such rise in prices ;

(*c*) whether it has not come to the notice of the Government that this restriction has acted as boon to anti-social elements, corrupt and some of the black marketeers ;

(*d*) whether it has come to the notice of the Government that enough quality of sugar, rice, cement etc. are being sold in open market at higher prices ?

Smt. E. E. VAZ (Minister of State for Food and Civil Supplies).—

(*a*) It has come to the notice of the Government that there is generally a rise in prices. The steps taken to arrest the same are as follows :—

Rice, wheat products, sugar, maize, bajara and jowar are being sold at fixed prices through fair price shops. Cotton coarse cloth like sarees, dhoties, long-cloth, shirting and drill is also sold at

(SMT. E. E. VAZ)

fixed prices through the Co-operative Institutions. Further, Automobile tyres of the sizes of 825×20, 900×20 and 1000×20 are sold at fixed prices on permits issued by competent authorities. In addition, statutory prices have been fixed in respect of vanaspathi, kerosene, petroleum products and automobile tyres. In respect of the following commodities, orders are issued making it obligatory on dealers to exhibit price list and for maintenance of proper accounts :—

1. Kerosene oil, diesel oil.
2. Vegetable oils (Mustard oil, groundnut oil, gingelly oil and coconut oil).
3. Textiles.
4. Baby foods.
5. Writing papers.
6. Cycle tyres and tubes (including tyres and tubes of Cycle Rickshaws).
7. Torch Cells.
8. Solvent extracted oil, de-oiled meal, edible flour.
9. Dry cells and batteries for Transistor Radios.
10. Tyres of all categories of automobiles such as tyres and tubes of scooters (including scooter rickshaws and auto-rickshaws), cars, buses, jeeps, vans, trucks, automobiles of any other categories whatsoever, tractors and tractor trollies.

Orders banning export of the following outside the State have been issued.

1. Paddy/rice.
2. Jowar.
3. Ragi.
4. Maize.
5. Navane.
6. Baraga.

The Mysore Guest Control Order enforced with effect from 21st September, 1972 prohibits the preparation, consumption and distribution of food stuffs prepared from or containing cereals or pulses and all sweets for more than 25 guests at ordinary parties or entertainments and 100 in case of marriage and funerals.

Action is being taken to strengthen and streamline the public distribution system.

Strict vigilance is kept to ensure compliance of the various Control Orders made under the Essential Commodities Act, 1955 and voilations are dealt with as per law.

(*b*) No.

(*c*) No.

(*d*) Yes.

ಶ್ರೀ ಎ. ಜಿ. ಕೊಡಗಿ.—(ಅ) ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಪ್ರಯತ್ನ ಪಟ್ಟಿದ್ದೀರಿ, ಅದು ಬಹಳ ಸಂತೋಷ. ಅಕ್ಕಿ ಗೋಧಿ, ಗೋಧಿಯಿಂದ ತಯಾರಿಸಿದ ವಸ್ತುಗಳು, ಸಕ್ಕರೆ, ಇತ್ಯಾದಿಗಳು ನ್ಯಾಯ ಬೆಲೆ ಅಂಗಡಿಗಳ ಮೂಲಕ ಮಾರಾಟವಾಗುತ್ತಿವೆ ಎಂದು ಹೇಳಿದ್ದೀರಿ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ನ್ಯಾಯ ಬೆಲೆಯ ಅಂಗಡಿಗಳಲ್ಲಿ ಈ ವಸ್ತುಗಳು ಮಾರಾಟವಾಗುತ್ತಿದೆ ಎನ್ನುವ ವಿವರವನ್ನು ಹೇಳಬಹುದೇ ?

†ಶ್ರೀಮತಿ ಇ. ಇ. ಪಾಜ್.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದೇ ಪ್ರಕಾರ ನಿತ್ಯೋಪಯೋಗಿ ವಸ್ತುಗಳನ್ನು ಕೊಡುವ ಹಾಗಿಲ್ಲ. ನಮ್ಮಲ್ಲಿ ಸ್ಟಾಕ್ ಎಷ್ಟು ಇದೆ ಎಂದು ನೋಡಿಕೊಂಡು ಕೊಡಲಾಗುತ್ತಿದೆ.

ಶ್ರೀ ಎ. ಜಿ. ಕೊಡಗಿ.—ಹಾಗಿದ್ದರೆ ತಮ್ಮ ಉತ್ತರ ಸರಿಯಾಗಿಲ್ಲ ಎಂದು ಭಾವಿಸಬೇಕಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಖ್ಯ ಸ್ಥಳಗಳಲ್ಲಿ ಮಾತ್ರ ಅಕ್ಕಿ ಮತ್ತು ಗೋಧಿಯ ವಸ್ತುಗಳನ್ನು ಕೊಡುವುದಕ್ಕೆ ಸಾಧ್ಯವಾಗಿದೆ. ಆದರೆ ಕರಾವಳಿ ಮತ್ತು ಒಳನಾಡಿನ ಪ್ರದೇಶದಲ್ಲಿ ಅಕ್ಕಿ, ಗೋಧಿ ಇತರೆ ವಸ್ತುಗಳನ್ನು ಕೊಡುತ್ತಾ ಇಲ್ಲ. ಇದಕ್ಕೆ ತಾವು ಸೂಕ್ತ ಕ್ರಮ ತೆಗೆದು ಕೊಂಡು ಎಲ್ಲಾ ವಸ್ತುಗಳನ್ನು ಎಲ್ಲಾ ನ್ಯಾಯ ಅಂಗಡಿಗಳಲ್ಲಿ ಹಾಕುವ ಹಾಗೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀಮತಿ ಇ. ಇ. ಪಾಜ್.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ರೇಷನಿಂಗ್ ಸಿಸ್ಟಂ ಇಲ್ಲ. ಪಟ್ಟಣಗಳಲ್ಲಿ ಒಬ್ಬರಿಗೆ 750 ಗ್ರಾಂ ಪ್ರಕಾರ ಸಕ್ಕರೆ ಕೊಡುತ್ತೇವೆ. ಎಲ್ಲಿ ಕಾರ್ಮಿಕರು ಜಾಸ್ತಿ ಇದ್ದಾರೆ, ಎಲ್ಲಿ ಕಾರ್ಖಾನೆಗಳು ಜಾಸ್ತಿ ಇವೆ, ಅಲ್ಲಿ ಮಾತ್ರ ಅಕ್ಕಿಯನ್ನು ಕೊಡುವ ಏರ್ಪಾಡು ಇದೆ. ಈಗ ಮಾನ್ಯ ಸದಸ್ಯರು ಹೇಳಿದ ಸಲಹೆಯನ್ನೂ ನಾವು ಗಮನಿಸುತ್ತೇವೆ.

ಶ್ರೀ ಟಿ. ಎಂ. ಮಂಜುನಾಥ್--.ರೇಷನ್ ಡಿಪೋಗಳನ್ನು ರಾಜ್ಯಾದ್ಯಂತ ತೆಗೆದಿದ್ದೇವೆ ಎಂದು ಅನೇಕ ಸಲ ಹೇಳಿದ್ದೀರಿ ಅದರ ಮಧ್ಯಾಂತರ ಆಹಾರ ಪದಾರ್ಥಗಳನ್ನು ಸರಬರಾಯಿ ಮಾಡುತ್ತೇವೆ, ಫೇರ್‌ಪ್ರೈಸ್ ಡಿಪೋ ಮುಖಾಂತರ ಜನಗಳಿಗೆ ಹಂಚಲು ಬೇಕಾಗುತಕ್ಕ ಆಹಾರ ಪದಾರ್ಥಗಳ ಸ್ಟಾಕ್ ಸರ್ಕಾರದಲ್ಲಿ ಇದೆಯೇ ? ಹಾಗಿದ್ದ ಪಕ್ಷದಲ್ಲಿ ಕೂಡಲೇ ಅದನ್ನು ರವಾನೆ ಮಾಡುವ ವ್ಯವಸ್ಥೆ ಮಾಡಿದ್ದೀರಾ ?

ಶ್ರೀಮತಿ ಇ. ಇ. ಪಾಜ್.—ಆದಷ್ಟು ಜಾಗ್ರತೆ ದೊರೆಯುವ ಏರ್ಪಾಡು ಮಾಡಿದ್ದೇವೆ. ಅಭಾವ ಪ್ರದೇಶದಲ್ಲಿ 40 ಅಥವಾ 50 ನ್ಯಾಯಬೆಲೆ ಅಂಗಡಿಗಳು ಇರಬೇಕು ಎಂದು ಏರ್ಪಾಡು ಮಾಡಿದ್ದೇವೆ. ಈಗ 3-4 ತಿಂಗಳಲ್ಲಿ 2 ಸಾವಿರಕ್ಕೂ ಹೆಚ್ಚಿನ ಫೇರ್‌ಪ್ರೈಸ್ ಡಿಪೋಗಳನ್ನು ತೆಗೆದಿದ್ದೇವೆ. ಸಗಟು ವ್ಯಾಪಾರ ತೆಗೆದುಕೊಂಡಮೇಲೆ ಅನೇಕ ಕಡೆಗಳಲ್ಲಿ ಇನ್ನೂ ಹೆಚ್ಚಿಗೆ ತೆಗೆಯುವ ಏರ್ಪಾಡು ಮಾಡುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಸ್ವಾಮಿ ಫೇರ್‌ಪ್ರೈಸ್ ಷಾಪುಗಳಲ್ಲಿ ಅನೇಕ ಕಡೆಗಳಲ್ಲಿ ಬೋರ್ಡ್ ಇದೆಯೇ ವಿನಃ ಆಹಾರ ಸಾಮಗ್ರಿ ಒಂದೂ ಇಲ್ಲ. ಎಲ್ಲೆಲ್ಲಿ ಆಹಾರ ಸಾಮಗ್ರಿ ಇಲ್ಲವೋ ಅಲ್ಲಿಗೆ ಅದನ್ನು ಸರಬರಾಯಿ ಮಾಡುತ್ತೀರಾ ? ಮೊನ್ನೆ ಹಬ್ಬಕ್ಕೆ ಹೆಚ್ಚಾಗಿ ಸರಬರಾಯಿ ಮಾಡುತ್ತೇವೆ ಎಂದು ಹೇಳಿದ್ದೀರಿ. ನಮ್ಮ ಊರಿನಲ್ಲಿ ಫೇರ್‌ಪ್ರೈಸ್ ಡಿಪೋನಲ್ಲಿ ಆಹಾರ ಪದಾರ್ಥವಿಲ್ಲ. ಈ ಅವ್ಯವಸ್ಥೆಯನ್ನು ತಪ್ಪಿಸುವುದಕ್ಕೆ ತುರ್ತು ಕ್ರಮ ಕೈಗೆದುಕೊಳ್ಳುತ್ತೀರಾ ?

ಶ್ರೀಮತಿ ಇ. ಇ. ಪಾಜ್.—ನಮ್ಮಲ್ಲಿ ಎಷ್ಟು ಸ್ಟಾಕ್ ಇರುತ್ತದೆ ಅದರ ಪ್ರಕಾರ ಪ್ರತಿಯೊಂದು ಕಡೆಯಲ್ಲೂ ನ್ಯಾಯವಾದ ರೀತಿಯಲ್ಲಿ ದೊರಕುವಂತೆ ಆದಷ್ಟು ಏರ್ಪಾಡು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರ ತಾಲ್ಲೂಕಿನಲ್ಲಿ ಎಲ್ಲಿ ಕೊರತೆ ಇದೆ, ಅದಕ್ಕೂ ಕೂಡ ಒದಗಿಸುವಂತೆ ಏರ್ಪಾಡು ಮಾಡುತ್ತೇವೆ.

Smt. WINNIFRED F. FERNANDES.—Because of the ban on inter-district movement, the prices of essential commodities have gone up. In view of this, is the Government going to remove this ban ?

Smt. E. E. VAZ.— It will be considered when it is found necessary to remove the ban.

ಶ್ರೀ ಕೆ. ಮಾದೇಗೌಡ.—ತಾವು (ಅ) ಉತ್ತರ ಕೊಡುತ್ತಾ ಟ್ರೈರ್‌ಗಳನ್ನು ಪರ್ಮಿಟ್ ಮುಖಾಂತರ ಸಂಬಂಧಪಟ್ಟ ಅಧಿಕಾರಿಗಳು ಕೊಡುತ್ತಾರೆ ಎಂದು ಹೇಳಿದ್ದೀರಿ. ಸರ್ಕಾರದ ವಾಹನಗಳಿಗೆ ಮಾತ್ರ ಟ್ರೈರುಗಳನ್ನು ಸಪ್ಲೈಮಾಡಿ ಉಳಿದರೆ ಖಾಸಗಿಯವರಿಗೆ ಸಪ್ಲೈಮಾಡಿ ಎಂದು ತಾವು ಆದೇಶ ಕಳುಹಿಸಿರತಕ್ಕದ್ದು ನಿಜವೇ ? ಆ ತರಹ ಆದೇಶ ಕಳುಹಿಸಿದ್ದರೆ ತಪ್ಪಾಗುವುದಿಲ್ಲವೇ?

ಶ್ರೀಮತಿ ಇ. ಇ. ವಾಜ್.—ಸರ್ಕಾರದ ವಾಹನಗಳಿಗೆ ಕೊಡಬೇಕೆಂದು ಆದೇಶ ಕೊಟ್ಟಿಲ್ಲ. ಮಾನ್ಯ ಸದಸ್ಯರಿಗೆ ಗೊತ್ತಾದ ಹಾಗೆ ಈ ಅಭಾವ ಪ್ರದೇಶಗಳಿಗೆ ಕುಡಿಯುವ ನೀರಿನ ತೊಂದರೆ ಬಹಳ ಇರುವುದರಿಂದ ಅಲ್ಲಿಗೆ ಹೆಚ್ಚುಹೆಚ್ಚಾಗಿ ಟ್ಯಾಕ್ಟರ್‌ಗಳನ್ನು ಕಳುಹಿಸಿದ್ದೇವೆ. ಅವುಗಳಿಗೆ ಬೇಕಾಗುವಷ್ಟು ಟೈರುಗಳನ್ನು ಒದಗಿಸುವುದು ನಮ್ಮ ಕರ್ತವ್ಯ ಆಗಿರುವುದರಿಂದ ಆದಕ್ಕೆ ಪ್ರಯಾರಿಟಿ ಕೊಟ್ಟು ಉಳಿದದ್ದು ಬೇರೆಯವರಿಗೆ ವಿತರಣೆ ಮಾಡುವುಕ್ಕೆ ಹೇಳಿದ್ದೇವೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಅಂತರ ಜಿಲ್ಲೆ ಸಾಗಾಣಿಕೆ ನಿರ್ಭಂಧ ಏನು ಇದೆ ಆದರಿಂದ ಸಾಕಷ್ಟು ಬೆಲೆ ಏರುವುದಕ್ಕೆ ಅವಕಾಶವಾಗಿದೆ ಎಂದು ನಮ್ಮಗಳ ಅಭಿಪ್ರಾಯವಾಗಿದೆ. ತಮಗೆ ತಿಳಿದಹಾಗೆ ಆಗುಂಬೆ ಕಡೆಯಲ್ಲಿ ಇರುವ ಗೇಟ್‌ನಲ್ಲಿ ಒಂದು ಲಾರಿಗೆ ಇಷ್ಟು ಕೊಡಬೇಕು ಎಂದು ನಿಗದಿಯಾಗಿ ಅದಕ್ಕೆ ಒಬ್ಬ ಏಜೆಂಟ್ ಸಪರೇಟ್ ಆಗಿ ನೇಮಕವಾಗಿ, ಆ ಏಜೆಂಟ್ ಮುಖಾಂತರ ಚೀಟಿ ತೆಗೆದುಕೊಂಡು ಬಂದರೆ ಗೇಟ್ ಪಾಸ್ ಕೊಡುವುದು ಎಂದು ಹೇಳುತ್ತಾರೆ. ಸಿ.ಐ.ಡಿ. ಒಂದು ಲಾರಿ ತಡೆದು ಅದರಲ್ಲಿದ್ದ ಪ್ರಯಾಣಿಕರನ್ನು ತಡೆಯಲು ಹೋದಾಗ ಕೂಡಲೆ ಎಲ್ಲರೂ ಸೇರಿಕೊಂಡು ಹೊಡೆದು ಬಡಿದು ಮಾಡಿರತಕ್ಕದ್ದು ತಮ್ಮ ಗಮನಕ್ಕೆ ಬಂದಿದೆಯೇ ? ರೇಟ್ ಜಾಸ್ತಿಯಾಗುವುದಕ್ಕೆ ನಿರ್ಭಂಧ ಹಾಕುವುದೂ ಒಂದು ಕಾರಣವಾಗಿದೆ, ಆದ್ದರಿಂದ ಅಂತರ ಜಿಲ್ಲಾ ಸಾಗಾಣಿಕೆ ನಿರ್ಭಂದವನ್ನು ತೆಗೆದುಹಾಕುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಮಾನ್ಯಸದಸ್ಯರು ಹೇಳಿದ ಹಾಗೆ ಅಂತರ ಜಿಲ್ಲಾ ನಿರ್ಭಂದ ಹಾಕಿರುವುದರಿಂದ ಬೆಲೆ ಏರಿದೆ ಎನ್ನುವುದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ ಎಂದು ತೋರುತ್ತದೆ. ಪ್ರೈವೇಟ್ ಇಂಡಿವಿಜ್ಯುಯಲ್ಸ್ ಒಂದೇ ಪರ್ಮಿಟ್‌ನಲ್ಲಿ 3-4 ಸಲ ಸಾಗಿಸುತ್ತಾರೆ. ಅದನ್ನು ನಿಲ್ಲಿಸಿ ಸಹಕಾರ ಸಂಘಗಳ ಮುಖಾಂತರ ಸಾಗಿಸುವಂತೆ ಏರ್ಪಾಡು ಮಾಡಬೇಕೆಂದು ಆದೇಶ ಕೊಟ್ಟಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ (ಇ) ಗೆ ಉತ್ತರ ಕೊಡುವಾಗ ಮುಕ್ತಮಾರುಕಟ್ಟೆಯಲ್ಲಿ ಸಾಕಷ್ಟು ಸಕ್ಕರೆ, ಅಕ್ಕಿ, ಸಿಮೆಂಟ್ ಹೆಚ್ಚಿನ ಕ್ರಯದಲ್ಲಿ ಮಾರಲಾಗುತ್ತಿದೆಯೇ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಬಂದಿದೆ ಎಂದು ಉತ್ತರ ಹೇಳಿದ್ದೀರಿ. ಹಾಗಿದ್ದ ಪಕ್ಷದಲ್ಲಿ ಹೆಚ್ಚಿನ ಕ್ರಯಕ್ಕೆ ಹೇರಳವಾಗಿ ಸಿಕ್ಕುವ ಸಂದರ್ಭದಲ್ಲಿ ನ್ಯಾಯವಾದ ಬೆಲೆಗೆ ಸಿಕ್ಕುವ ರೀತಿಯಲ್ಲಿ ತಾವು ಏನು ವ್ಯವಸ್ಥೆ ಮಾಡಿದ್ದೀರಿ ?

ಶ್ರೀಮತಿ ಇ. ಇ. ವಾಜ್.—ಮಾನ್ಯ ಸದಸ್ಯರಿಗೆ ಸ್ಪಷ್ಟವಾಗಿ ಗೊತ್ತಿದೆ ಎಷ್ಟು ಸ್ಟಾಕ್ ಇದೆ ಅದು ನ್ಯಾಯವಾದ ರೀತಿಯಲ್ಲಿ ಜನರಿಗೆ ಅದಷ್ಟು ದೊರಕುವಂತೆ ಮಾಡಲು ಸರ್ಕಾರದವರು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಮೈಸೂರು ದೇಶದಲ್ಲಿ ಪ್ರತಿಯೊಬ್ಬರಿಗೂ ಎಲ್ಲಾ ಕಡೆ ಸಕ್ಕರೆಯನ್ನು ವಿತರಣೆ ಮಾಡುವ ಏರ್ಪಾಡು ಮಾಡಿದ್ದೇವೆ. ನಾವು ಕೊಡುವುದಲ್ಲದೆ ಅದರ ಜೊತೆಗೆ ಹೆಚ್ಚು ಸಕ್ಕರೆ ಅಗತ್ಯ ಇದ್ದರೆ ಬೇರೆ ಕಡೆ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಪಿ. ಎಂ. ಭಂಗಿ.—ಸಹಕಾರ ಸಂಘಗಳ ಮುಖಾಂತರ ಹಂಚುತ್ತೀರಾ ? ಬಿಜಾಪುರ ಜಿಲ್ಲೆಯಲ್ಲಿ ಈ ವ್ಯವಸ್ಥೆಯಾಗಿಲ್ಲ, ಕಾರಣ ಏನು ? ಹಂಚುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಇ. ಇ. ವಾಜ್.—ಎಲ್ಲಾ ಕಡೆಯಲ್ಲಿ ಸಹಕಾರ ಸಂಘಗಳ ಮುಖಾಂತರ ಹಂಚುವ ಹಾಗೆ ಮಾಡಿದ್ದೇವೆ. ಎಲ್ಲಿ ಸಹಕಾರ ಸಂಘಗಳು ಸರಿಯಾಗಿ ಕೆಲಸ ಮಾಡುವುದಿಲ್ಲ ಅಂಥ ಕಡೆ ಇಂಡಿವಿಜ್ಯುಯಲ್ಸ್‌ಗೆ ಕೊಡುವ ಏರ್ಪಾಡು ಇದೆ. ಅದರಲ್ಲಿ ಕೂಡ ಬಿಜಾಪುರ, ಗುಲ್ಬರ್ಗಾ, ಬೀದರ್ ಜಿಲ್ಲೆಗಳಿಗೆ ಜಾಸ್ತಿ ಗಮನ ಕೊಡುತ್ತೇವೆ. ಮಾನ್ಯ ಸದಸ್ಯರಿಗೆ ಅದು ಸ್ಪಷ್ಟವಾಗಿ ತಿಳಿದಿದೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಈ ವಿಷಯದಲ್ಲಿ ಬೆಲೆಗಳು ಏರುತ್ತಾ ಇರುವುದು ಗಮನಕ್ಕೆ ಬಂದಿದೆ ಎಂದು ಹೇಳುತ್ತೀರಿ. ತಾವು ಯಾವ ರೀತಿ ಕಾರ್ಯಕ್ರಮ ತೆಗೆದುಕೊಂಡರೂ ಬೆಲೆ ಕಡಿಮೆಯಾಗುವಂತೆ ಕಾಣುವುದಿಲ್ಲ. ಎಷ್ಟು ಕೇನಸ್‌ನಲ್ಲಿ ಜಾಸ್ತಿ ಬೆಲೆಗೆ ಮಾರಿರುವವರನ್ನು ಹಿಡಿದಿದ್ದೀರಿ ಮತ್ತು ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಬೆಲೆಯನ್ನು ಹೇಗೆ ಕಡಿಮೆ ಮಾಡುತ್ತೀರಿ ?

ಶ್ರೀಮತಿ ಇ. ಇ. ವಾಜ್.—ನಾನು ಮೊದಲು ಒಂದು ಸಲ ಉತ್ತರ ಕೊಡುತ್ತಾ ಎಷ್ಟು ಕೇನಸ್ ಹಿಡಿದಿದ್ದೇವೆ, ಎಷ್ಟು ಪಲ್ಲ ಸಾಮಗ್ರಿಗಳನ್ನು ಹಿಡಿದಿದ್ದೇವೆ ಎಂದು ಹೇಳಿದ್ದೇನೆ. ನಮ್ಮ ಮಾನ್ಯ ಸದಸ್ಯರು ಹೇಳಿದರು ಬೆಲೆ ಗಗನಕ್ಕೆ ಏರುತ್ತಿದೆ ಎಂದು. ಎಲ್ಲಾ ಕಡೆ ಕಂಪೇರ್ ಮಾಡಿದ್ದೇವೆ. ಬೆಲೆಯನ್ನು ಹತೋಟಿಯಲ್ಲಿ ತರಲು ಮೈಸೂರು ಸರ್ಕಾರ ಬಹಳ ಪ್ರಯತ್ನ ಮಾಡಿದೆ. ಮಾನ್ಯ ಸದಸ್ಯರಿಗೆ ತಿಳಿದಿದೆ ಇನ್ನೂ ಕೂಡ ತಡೆಗಟ್ಟಲು ಸಗಟು ವ್ಯಾಪಾರ ತೆಗೆದು ಕೊಂಡಿರುವುದು.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಸ್ಟಾಮಿ ಬೆಲೆ ಸಾಧಾರಣವಾಗಿ ಏರುತ್ತಾ ಇರುವುದು ಗಮನಕ್ಕೆ ಬಂದಿದೆಯೆಂದು ಹೇಳಿದ್ದೀರಿ. ಬೇಕಾದಷ್ಟು ಏರುತ್ತಾ ಇದೆ. ನಿಮಗೆ ಡಿಮಾಂಡ್ ಎಷ್ಟು ಇದೆ ; ಎಷ್ಟು ಅವಶ್ಯಕವಾಗಿ ಆಹಾರವನ್ನು ಡಿಫ್ರೋಗಳಿಗಾಗಲಿ, ಸೊಸೈಟಿಗಳಿಗಾಗಲಿ ಕೊಡಬೇಕು ಅಷ್ಟು ಕೊಡುತ್ತಾ ಇಲ್ಲ. ಜೊತೆಗೆ ಸಮಾಜದ್ರೋಹಿಗಳು, ಲಂಚಕೋರ ವ್ಯಾಪಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಶುಗರ್ ಇದೆ, ಒದಗಿಸಿದೆ. ಆದರೆ ನಿಜವಾಗಿ ನೀವು ಒದಗಿಸತಕ್ಕಂಥ ಆಹಾರದ ಕ್ವಾಂಟಿಟಿ ಸಾಗುತ್ತಿಲ್ಲ. ಅದನ್ನು ಜನಗಳಿಗೆ ಸಾಕಷ್ಟು ಒದಗಿಸುತ್ತಾ ಇಲ್ಲ. ಆದ್ದರಿಂದ ಎಷ್ಟು ಅವಶ್ಯಕವಿದೆಯೋ ಅಷ್ಟು ಒದಗಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಜನಗಳಿಗೆ ಬೇಕಾದಷ್ಟು ಒದಗಿಸಲಿಕ್ಕೆ ನಮ್ಮಿಂದ ಸಾಧ್ಯವಿಲ್ಲ, ತಮಗೆ ಗೊತ್ತಾದ ಹಾಗೆ ಅಭಾವ ಬಂದಿರುವುದರಿಂದ ಉತ್ಪತ್ತಿ ಬಹಳ ಕಡಿಮೆ ಮಟ್ಟಕ್ಕೆ ಬಂದಿದೆ. ಎಷ್ಟು ಲೆವ್ಪಿ ನಂಗ್ರಹಿಸಬೇಕು ಎಂದು ಏರ್ಪಾಡು ಮಾಡಿದ್ದೇವೆ. ಅವಕ್ಕೆ ಎಲ್ಲಾ ಸದಸ್ಯರು ಸಹ ಕರಿಸಿ ತಮ್ಮ ತಮ್ಮ ಕ್ಷೇತ್ರದಲ್ಲಿ ಕೊಡುವ ಲೆವ್ಪಿಯನ್ನು ಕೊಡಿಸಿ ಎಂದು ಕೇಳಿಕೊಂಡು ಆದಷ್ಟು ಮಟ್ಟಿಗೆ ಸರಬರಾಯಿ ಮಾಡುವುದನ್ನು ಹೆಚ್ಚಿಸಲಿಕ್ಕೆ ನೋಡುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಆಹಾರ ನಿಮ್ಮ ಕೈಯ್ಯಲ್ಲಿ ಸಪ್ಲೈ ಮಾಡುವುದಕ್ಕೆ ಆಗುವುದಿಲ್ಲ, ಟೈರ್ ಕ್ವಾರ್ಟರ್‌ಗೆ 2 ಟೈರ್ ಕೊಡುತ್ತಾ ಇದ್ದೀರಿ ಖಾಸಗಿ ಬಸ್ ಮಾಲೀಕರು, ರಾತ್ರಿ ಮಾಲೀಕರುಗಳಿಗೆ ಕ್ವಾರ್ಟರ್‌ಗೆ 2 ಟೈರ್‌ಗಳನ್ನು ಕೊಟ್ಟರೆ ಅವರು ಬಸ್ಸುಗಳನ್ನು ನಿಲ್ಲಿಸಿಬಿಡುತ್ತಾರೆ. ಆಜೀಪ್ ಸೇಟ್ ಆವರ ಬಸ್ಸುಗಳು ಹೊಗುವುದಿಲ್ಲ. ಆದ್ದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ 2 ತಿಂಗಳಿಗೆ 2 ಟೈರ್‌ಗಳನ್ನು ಕೊಡುವಂತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀಮತಿ ಇ. ಇ. ವಾಜ್.—ನಮಗೆ ಬರುವ ಟೈರ್ ಕೋಟ ಜಾಸ್ತಿ ಆದ ತಕ್ಷಣ ಜಾಸ್ತಿ ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಎ. ಜಿ. ಕೊಡಗಿ.—ನಿಮ್ಮ ಹೊಸ ಆಜ್ಞೆ ಪ್ರಕಾರ ರಾಜ್ಯದಲ್ಲಿ ಹೋಟರ್‌ಗಳಲ್ಲಿ ಊಟ ಮಾಡುವಾಗ ಅಕ್ಕಿ ಊಟ ಮಾಡುವವರಿಗೆ ಕೇವಲ ಅನ್ನ ಕೊಡಬೇಕು, ಗೋಧಿ ಉಪಯೋಗ ಮಾಡುವವರಿಗೆ ಕೇವಲ ಗೋಧಿ ಹೆಚ್ಚಿನ ಚಪಾತಿ ಕೊಡಬೇಕು, ಎರಡನ್ನೂ ಕೊಡಕೂಡದು ಎಂದು ಹೊಸ ಆರ್ಡರ್ ಮಾಡಿದ್ದೀರಿ. ಅದರ ಪರಿಣಾಮವಾಗಿ ನಮ್ಮ ರಾಜ್ಯದಲ್ಲಿ ಅಕ್ಕಿ ಉಪಯೋಗ ಹೆಚ್ಚಾಗಿರುವುದರಿಂದ ಅಕ್ಕಿ ಅಭಾವ ಜಾಸ್ತಿಯಾಗಿದೆ. ಆದ್ದರಿಂದ ಈ ಆಜ್ಞೆಯನ್ನು ಪುನಃ ಪರಿಶೀಲನೆ ಮಾಡುವುದಕ್ಕೆ ಆಲೋಚನೆ ಮಾಡುತ್ತೀರಾ ?

ಶ್ರೀಮತಿ ಇ. ಇ. ವಾಜ್.—ತಮ್ಮ ಸಲಹೆಯನ್ನು ಗಮನಿಸುತ್ತೇನೆ.